ಮಾಡಬಹುದು.

## (ಬ) ಸ್ವಾಮಿತ್ವದ ವರ್ಗಾವಣೆ
## (Transfer of Property)

### I. ಪ್ರವೇಶಿಕೆ (Introduction)

ಮಾರಾಟ ಒಪ್ಪಂದದಲ್ಲಿ ಸರಕುಗಳಲ್ಲಿನ ಸ್ವಾಮಿತ್ವವು ಮಾರುವವನಿಂದ ಕೊಳ್ಳುವವನಿಗೆ ವರ್ಗಾವಣೆಯಾಗುವದೇ ಅತೀ ಮುಖ್ಯವಾದ ಅಂಶವಾಗಿದೆ. ಏಕೆಂದರೆ, ಸ್ವಾಧೀನತೆಯ (Possession) ವರ್ಗಾವಣೆ ಮತ್ತು ಸ್ವಾಮಿತ್ವದ (Ownership) ವರ್ಗಾವಣೆಗಳೆರಡು ಭಿನ್ನವಾಗಿವೆ. ಸ್ವಾಧೀನತೆಯ ವರ್ಗಾವಣೆಯು ಸ್ವಾಮಿತ್ವ ವರ್ಗಾವಣೆಯಾಗುದಿಲ್ಲ ಮತ್ತು ತದ್ವಿರುದ್ಧವಾದ ಪ್ರಸಂಗದಲ್ಲಿ, ಕೊಳ್ಳುವವನು ಸರಕುಗಳ ಸ್ವಾಮಿತ್ವ ಹೊಂದಿರಬಹುದು

Scanned with CamScanner

(ಮಾಲಿಕತ್ವ) ಆದರೆ ಸ್ವಾಧೀನತೆ ಮಾತ್ರ ಮಾರಾಟಗಾರನ ಬಳಿಗೆ ಇರಬಹುದು. ಕೆಲವು ಸಾರಿ ಸರಕುಗಳು ಖರೀದಿದಾರನ ಸ್ವಾಧೀನದಲ್ಲಿರಬಹುದು, ಆದರೆ ಸ್ವಾಮಿತ್ವವು ಮಾರಾಟಗಾರನಲ್ಲಿಯೇ ಇರಬಹುದು. ಆದ್ದರಿಂದ, ಮಾರಾಟ ಒಪ್ಪಂದದ ಮುಖ್ಯ ಅಂಶವಾದ ಸ್ವಾಮಿತ್ವ ವರ್ಗಾವಣೆ ಯಾವಾಗ ಆಗುತ್ತದೆಯೆಂದು ಸ್ಪಷ್ಟವಾಗಿ ತಿಳಿದುಕೊಳ್ಳುವದು ಅತ್ಯವಶ್ಯಕವಾಗಿದೆ.

## II. ಅರ್ಥವಿವರಣೆ (Meaning)

ಸರಕುಗಳ ಸ್ವಾಮಿತ್ವವೆಂದರೆ ಅವುಗಳನ್ನು ಹೊಂದುವ ಮಾಲಿಕತ್ವ ಅಥವಾ ಯಜಮಾನಿಕೆ ಎಂದು ಅರ್ಥ. ಆದ್ದರಿಂದ, ಸ್ವಾಮಿತ್ವ ವರ್ಗಾವಣೆಯೆಂದರೆ ಮಾರಾಟಗಾರನಿಂದ ಸರಕುಗಳ ಮಾಲಿಕತ್ವವು ಖರೀದಿದಾರನಿಗೆ ವರ್ಗಾವಣೆಯಾಗುವದು. ಆದರೆ, ಸರಕುಗಳ ಸ್ವಾಧೀನತೆಯ ವರ್ಗಾವಣೆಯು ಕೇವಲ ಅವುಗಳನ್ನು ಇಟ್ಟುಕೊಂಡಿರುವ ಸ್ಥಿತಿಯನ್ನು ಸೂಚಿಸುತ್ತದೆ. ಸರಕುಗಳ ಸ್ವಾಮಿತ್ವ ವರ್ಗಾವಣೆಯಾದಾಗ ಅವುಗಳಲ್ಲಿನ ಅಪಾಯವು (Risk) ಖರೀದಿದಾರನಿಗೆ ವರ್ಗಾವಣೆಯಾಗುತ್ತದೆ. ಆದ್ದರಿಂದ, ನಿಜವಾಗಿಯೂ ಯಾವಾಗ ಸರಕುಗಳಲ್ಲಿನ ಸ್ವಾಮಿತ್ವ ವರ್ಗಾವಣೆಯಾಗುತ್ತದೆಯೆಂದು ತಿಳಿದುಕೊಳ್ಳಬೇಕು. ಏಕೆಂದರೆ, ಮಾರಾಟದ ಒಪ್ಪಂದದವಾದ ನಂತರ ಸರಕುಗಳನ್ನು ಖರೀದಿದಾರನಿಗೆ ನೀಡುವ ಮತ್ತು ಮಾರುವದರ ಮಧ್ಯೆ ಸಮಯದ ಅಂತರವಿರುತ್ತದೆ. ಆ ಸಮಯಾಂತರದ ಮಧ್ಯದಲ್ಲಿ ಸರಕುಗಳ ಜವಾಬ್ದಾರಿಯನ್ನು ಯಾರು ಹೊತ್ತುಕೊಳ್ಳುತ್ತಾರೆಂಬುದು ಮಹತ್ವದ ನಿರ್ಧಾರ. ಯಾವ ನಿರ್ದಿಷ್ಟ ಸಮಯದಲ್ಲಿ ಸರಕುಗಳಲ್ಲಿ ಸ್ವಾಮಿತ್ವವು ಮಾರಾಟಗಾರನಿಂದ ಖರೀದಿದಾರನಿಗೆ ವರ್ಗಾವಣೆಯಾಗಿದೆಯೆಂದು ತಿಳಿಯಬೇಕು ? ಅಪಾಯ ಯಾವಾಗ ವರ್ಗಾವಣೆಯಾಗುತ್ತದೆ ? ಸರಕು ಯಾರ ಸ್ವಾಧೀನದಲ್ಲಿ ? ಎಂಬ ಕೆಲವು ಸಮಸ್ಯೆಗಳನ್ನು ಮಾರಾಟ ಒಪ್ಪಂದದಲ್ಲಿ ನಿರ್ಣಯಿಸಬೇಕಾಗುತ್ತದೆ.

## III. ಅಷ್ಟೊಂದು ಮಹತ್ವ ಏಕೆ ? (Why so significant ?)

ಸರಕುಗಳಲ್ಲಿನ ಸ್ವಾಮಿತ್ವ ಮಾರಾಟಗಾರನಿಂದ ಖರೀದಿದಾರನಿಗೆ ಯಾವಾಗ ವರ್ಗಾವಣೆಯಾಗುವದೆಂಬ ಅಂಶವು ಈ ಕೆಳಗಿನ ಕಾರಣಗಳಿಂದಾಗಿ ಮಹತ್ವವೆನಿಸುತ್ತದೆ.

**1. ನಷ್ಟದ ಅಪಾಯ-** ಸರಕುಗಳಲ್ಲಿನ ಸ್ವಾಮಿತ್ವದ ವರ್ಗಾವಣೆಯು ಖರೀದಿದಾರನಿಗೆ ವರ್ಗಾವಣೆಯಾದಾಗ ಅದರೊಂದಿಗೆ ನಷ್ಟದ ಅಪಾಯವೂ ಸಹ ಕೊಳ್ಳುವವನಿಗೆ ವರ್ಗಾವಣೆಗೊಳ್ಳುತ್ತದೆ. ಒಂದು ವೇಳೆ ನಷ್ಟ ಸಂಭವಿಸಿದರೆ ಅಥವಾ ಸರಕು ನಾಶ ಹೊಂದಿದರೆ ಅದರ ಯಜಮಾನನು ಹೊಣೆಗಾರನಾಗುತ್ತಾನೆ. ಮಾರಾಟದ ಒಪ್ಪಂದದಲ್ಲಿ, ಸರಕು ಮಾರಾಟಗಾರನ ಬಳಿಯಲ್ಲಿದ್ದರೆ, ಆಗ ಕೊಳ್ಳುವವನೇ ಸರಕುಗಳ ನಷ್ಟಕ್ಕೆ ಜವಾಬ್ದಾರನಾಗುತ್ತಾನೆ.

ಉದಾಹರಣೆಗಾಗಿ- 'ಯ'ನ ಕಟ್ಟಿಗೆಯ ಅಡ್ಡೆಯಲ್ಲಿರುವ ಉರುವಲು ಕಟ್ಟಿಗೆಯ ಖರೀದಿಸಲು 'ಕ'ನು ಪ್ರಸ್ತಾಪಿಸುತ್ತಾನೆ. 'ಯ' ನು ಅದನ್ನು ಒಪ್ಪುತ್ತಾನೆ. ಅದಕ್ಕಾಗಿ ಪಾವತಿಸಲು ಒಪ್ಪಿದ ರೂ. 1000/–ಗಳನ್ನು ಪಾವತಿಸುವವರೆಗೆ ಕಟ್ಟಿಗೆಯು 'ಯ'ನ ಆವರಣದಲ್ಲಿಯೇ ಉಳಿಯಲೆಂದು ಒಪ್ಪಂದ ಮಾಡಿಕೊಳ್ಳಲಾಯಿತು. ಇವೆರಡರ ಸಮಯದ ಮಧ್ಯದಲ್ಲಿ (ಹಣ ಪಾವತಿಸುವ ಸಮಯ ಮತ್ತು ಕಟ್ಟಿಗೆಯು ಇನ್ನೂ 'ಯ'ನ ಆವರಣದಲ್ಲಿರುವಾಗ) ಅಪಘಾತ ಘಟಿಸಿ, ಕಟ್ಟಿಗೆಯು ನಾಶ ಹೊಂದಿದವು. ಈ ಪ್ರಸಂಗದಲ್ಲಿ 'ಕ'ನು ನಷ್ಟವನ್ನು

Scanned with CamScanner

ಭರಿಸಬೇಕಾಗುತ್ತದೆ. ಏಕೆಂದರೆ ಸರಕುಗಳಲ್ಲಿನ ಮಾಲಿಕತ್ವವು ಅವನಿಗೆ ವರ್ಗಾವಣೆಗೊಂಡಿತ್ತು ಕೇವಲ ಅದರ ಸ್ವಾಧೀನತೆ 'ಯ'ನ ಬಳಿಯಲ್ಲಿತ್ತು 'ಯ'ನು 'ಕ'ನ ಪ್ರಸ್ತಾಪವನ್ನು ಒಪ್ಪಿದಾಗಲೇ ಆದರ ಮಾಲಿಕತ್ವ ವರ್ಗಾವಣೆಗೊಂಡಿತ್ತು, ಅವುಗಳ ಸ್ವಾಧೀನತೆಯು 'ಯ'ನಲ್ಲಿರುವದು ಇಲ್ಲಿ ಮಹತ್ವವಾಗಲಾರದು. ಇದರಲ್ಲಿ ಬೆಲೆ ಪಾವತಿಗೊಳಿಸುವದನ್ನು ಮತ್ತು ಸರಕು ವಿಲೇವಾರಿ ಮಾಡುವದನ್ನು ಮುಂದೂಡಿದ್ದರೂ ಸಹ, ಸರಕುಗಳಲ್ಲಿ ಮಾಲಿಕತ್ವವು 'ಯ'ನಿಂದ 'ಕ'ನಿಗೆ ವರ್ಗಾವಣೆಗೊಂಡಿತ್ತು, 'ಕ'ನ ಪ್ರಸ್ತಾಪವನ್ನು 'ಯ'ನು ಒಪ್ಪಿದಾಗಲೇ ಒಪ್ಪಂದ ಪೂರ್ತಿಗೊಂಡಿತ್ತು.

'ಕ'ನ ಮತ್ತು 'ಯ'ನ ಮಧ್ಯೆ ತದ್ವಿರುದ್ಧದ ಒಪ್ಪಂದವಾಗಿರದಿದ್ದರೆ, ಈ ಮೇಲಿನ ಪ್ರಸಂಗ ಅನ್ವಯಿಸುತ್ತದೆ. ಒಂದು ವೇಳೆ, ಅವರಿಬ್ಬರು ಮಾತುಕತೆ ಮೂಲಕ ಸರಕುಗಳು 'ಯ'ನ ಸ್ವಾಧೀನದಲ್ಲಿರುವವರೆಗೆ ಅವರೇ ಜವಾಬ್ದಾರನೆಂದು ಒಪ್ಪಿದ್ದರೆ, ಅವುಗಳ ನಷ್ಟಕ್ಕೆ 'ಯ'ನು ಜವಾಬ್ದಾರನಾಗುತ್ತಾನೆ.

**2. ಮಾಲಿಕತ್ವಕ್ಕೆ ದಾವೆ-** ಮೂರನೆಯ ವ್ಯಕ್ತಿಯಿಂದ ಸರಕುಗಳು ನಷ್ಟ ಹೊಂದಿದ್ದರೆ ಅದರ ನೈಜವಾದ ಮಾಲಿಕನು ದಾವೆ ಹೂಡುವ ಹಕ್ಕು ಹೊಂದಿರುತ್ತಾನೆ.

**3. ದಿವಾಳಿತನದ ಪ್ರಕರಣಗಳು-** ಮಾರಾಟಗಾರನು ಅಥವಾ ಕೊಳ್ಳುವವನು ದಿವಾಳಿಕೋರನಾದರೆ, ಆಸ್ತಿ ನಿರ್ವಾಹಕನು (Official Assignee) ಯಾವ ತರಹದ ಅಧಿಕಾರ ಚಲಾಯಿಸಬೇಕೆಂಬುದು ಸ್ವಾಮಿತ್ವ ವರ್ಗಾವಣೆಯ ಮೇಲೆ ಅವಲಂಭಿತವಾಗಿದೆ. ಅವನು ಸ್ವಾಮಿತ್ವ ಹೊಂದಿದ ವ್ಯಕ್ತಿಯೊಂದಿಗೆ ವ್ಯವಹರಿಸಬೇಕೆ ವಿನಃ ಸ್ವಾಧೀನತೆ ಹೊಂದಿದವನೊಂದಿಗೆ ಅಲ್ಲ.

**4. ಬೆಲೆಗಾಗಿ ದಾವೆ-** ಸರಕುಗಳ ಮಾಲಿಕತ್ವ ಕೊಳ್ಳುವವನಿಗೆ ವರ್ಗಾವಣೆಗೊಂಡಾಗ ಮಾತ್ರವೇ ಮಾರುವವನು ಬೆಲೆ ವಸೂಲಿಗಾಗಿ ಕೊಳ್ಳುವವನ ಮೇಲೆ ದಾವೆ ಮಾಡಬಹುದಾಗಿದೆ.

## IV. ಸರಕಿನಲ್ಲಿಯ ಸ್ವಾಮಿತ್ವ ಯಾವಾಗ ವರ್ಗಾವಣೆಗೊಳ್ಳುತ್ತದೆ ?

(When is Property in Goods Transferred ?)

ಮಾರಾಟ ಒಪ್ಪಂದದ ಕಕ್ಷಿದಾರರು ಸರಕುಗಳಲ್ಲಿನ ಸ್ವಾಮಿತ್ವ ಯಾವಾಗ ವರ್ಗಾವಣೆಗೊಳ್ಳಬೇಕೆಂದು ನಿರ್ಣಯಿಸಲು ಸಂಪೂರ್ಣ ಸ್ವತಂತ್ರರಾಗಿದ್ದಾರೆ. ಅವರಿಬ್ಬರ ಮಧ್ಯದ ಸ್ಪಷ್ಟ ಒಪ್ಪಂದವಿದ್ದಾಗ, ನಷ್ಟ ಭರಿಸುವ ಜವಾಬ್ದಾರಿಯ ಪ್ರಶ್ನೆಯ ನಿಷ್ಕರ್ಷೆ ಸಮಸ್ಯಾತ್ಮಕವೆನಿಸುವದಿಲ್ಲ. ಅವರಿಬ್ಬರು ಆದರ ಬಗ್ಗೆ ಒಪ್ಪದಿದ್ದ ಸಂದರ್ಭದಲ್ಲಿ ಈ ಸ್ವಾಮಿತ್ವದ ಪ್ರಶ್ನೆ ಉದ್ಭವಿಸುತ್ತದೆ. ಆಗ ಯಾವ ತರಹದ ಸರಕುಗಳನ್ನು ವ್ಯವಹರಿಸಲಾಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

### i. ನಿರ್ದಿಷ್ಟ ಅಥವಾ ಗುರುತಿಸಿದ ಸರಕುಗಳ ಸ್ವಾಮಿತ್ವ ವರ್ಗಾವಣೆ

ಕಾನೂನಿನ ಪರಿಚ್ಛೇದ 19 ರ ಪ್ರಕಾರ, ನಿರ್ದಿಷ್ಟ ಅಥವಾ ಗುರುತಿಸಿದ ಸರಕುಗಳ ಮಾರಾಟ ಒಪ್ಪಂದದಲ್ಲಿ ಕಕ್ಷಿದಾರು ಯಾವಾಗ ಬಯಸುವರೋ ಆಗ ಸರಕುಗಳಲ್ಲಿಯ ಮಾಲಿಕತ್ವವು ವರ್ಗಾವಣೆಯಾಗುತ್ತದೆ.

Scanned with CamScanner

ಇದರ ಪ್ರಕಾರ, ಒಪ್ಪಂದದ ಕಕ್ಷಿದಾರರೇ ಪರಮಾಧಿಕಾರವನ್ನು ಹೊಂದಿದ್ದು, ಅವರೇ ಸ್ವಾಮಿತ್ವ ವರ್ಗಾವಣೆಯ ಬಗ್ಗೆ ನಿರ್ಧರಿಸಬಹುದು. ಮೂರನೆಯ ವ್ಯಕ್ತಿ ಅಥವಾ ಕಾನೂನು ಅಡ್ಡಿ ಬರುವದಿಲ್ಲ. ಯಾವುದೇ ನಿರ್ದಿಷ್ಟ ಸಮಯವನ್ನು ನಿರ್ಧರಿಸಬಹುದು. ಉಳಿದೆಲ್ಲ ವಿಷಯಗಳು ಗೌಣವಾಗುತ್ತವೆ. ಒಪ್ಪಂದದಲ್ಲಿ ಒಪ್ಪಂದ ಅಂಶಗಳನ್ನು ಪರಿಗಣಿಸಿ, ಪ್ರತಿಯೊಂದು ಪ್ರಸಂಗದಲ್ಲಿನ ಕಕ್ಷಿದಾರರ ವರ್ತನೆಯ ಪ್ರಕಾರ, ಅವರ ಮನಸ್ಸಿಚ್ಛೆಯನ್ನು ತಿಳಿದುಕೊಳ್ಳಬಹುದಾಗಿದೆ.

ಉದಾಹರಣೆಗಾಗಿ- **Amies v/s. Jal (1924) AIR Bombay, 41.** ಈ ಪ್ರಕರಣದಲ್ಲಿ ಒಂದು ಕಂತು ರೂಪದ ಮಾರಾಟದ ಪ್ರಸಂಗದಲ್ಲಿ ವಸ್ತುವಿನಲ್ಲಿಯ ಮಾಲಿಕತ್ವವು ಕೇವಲ ಕೊನೆಯ ಕಂತು ಪಾವತಿಸಿದಾಗಲೇ ವರ್ಗಾವಣೆಗೊಳ್ಳುವದೆಂದು ಒಪ್ಪಿದ್ದರೆ, ಅದುವೇ ಅಂತಿಮ. ಕೊನೆಯ ಕಂತು ಪಾವತಿಸಿದಾಗಲೇ ಸ್ವಾಮಿತ್ವ ವರ್ಗಾವಣೆಯಾಗುತ್ತದೆ.

ಕಾನೂನಿನ ಪರಿಚ್ಛೇದ 20 ರ ಪ್ರಕಾರ, ಗುರುತಿಸಿದ ಸರಕುಗಳ ಷರತ್ತು ರಹಿತ ಮಾರಾಟದಲ್ಲಿ ಸರಕುಗಳಲ್ಲಿನ ಮಾಲಿಕತ್ವವು ಒಪ್ಪಂದ ಮಾಡಿಕೊಂಡಾಗಲೆ ವರ್ಗಾವಣೆಯಾಗುತ್ತದೆ. ಅವುಗಳಿಗೆ ಬೆಲೆಯನ್ನು ಪಾವತಿಸಲಾಗಿದೆಯೋ ಅಥವಾ ಸರಕು ವಿಲೇವಾರಿ ಮಾಡಲಾಗಿದೆಯೇ ಎಂಬುವದು ಮಹತ್ವವೆನಿಸುವದಿಲ್ಲ. ಎರಡನ್ನು ಮುಂದೂಡಿದಾಗಲೂ ಅವು ಮಹತ್ವದ್ದೆನಿಸಲಾರವು. ಈ ಪರಿಚ್ಛೇದವು ಅನ್ವಯಿಸಬೇಕಾದರೆ–

1. ಸರಕುಗಳು ವಿಲೇವಾರಿಯ ಸ್ಥಿತಿಯಲ್ಲಿರಬೇಕು.
2. ಮಾರಾಟವು ನಿರ್ದಿಷ್ಟ ಸರಕುಗಳಿಗೆ ಸಂಬಂಧಿಸಿರಬೇಕು.
3. ಮಾರಾಟವು ಷರತ್ತು ರಹಿತವಾಗಿರಬೇಕು.

**ಪರಿಚ್ಛೇದ 20 ಕ್ಕೆ ಅಪವಾದಗಳು (ಅನ್ವಯಿಸದಿರುವಿಕೆ) :** ನಿರ್ದಿಷ್ಟ ಸರಕುಗಳಲ್ಲಿನ ಸ್ವಾಮಿತ್ವವು ಒಪ್ಪಂದದ ಸಮಯದಲ್ಲಿ ವರ್ಗಾವಣೆಯಾಗುವದಿಲ್ಲ. ಅಂತಹ ಪ್ರಸಂಗಗಳೆಂದರೆ–

1. ನಿರ್ದಿಷ್ಟ ಸರಕುಗಳನ್ನು ವಿಲೇವಾರಿಯ ಸ್ಥಿತಿಗೆ ಇಡಬೇಕಾಗಿರುವ ಸಂದರ್ಭದಲ್ಲಿ **(ಪರಿಚ್ಛೇದ 21)**
2. ಸರಕುಗಳ ಮೌಲ್ಯವನ್ನು ಕಂಡು ಹಿಡಿಯಲು ಅವುಗಳನ್ನು ಅಳತೆ ಮಾಡುವ ಅಥವಾ ತೂಕ ಮಾಡುವದು ಇನ್ನೂ ಬಾಕಿಯಿದ್ದರೆ **(ಪರಿಚ್ಛೇದ 22)**
3. ಸರಕುಗಳನ್ನು 'ಒಪ್ಪುವ ಆಧಾರ 'ದ ಮೇಲೆ ರವಾನಿಸಿದ್ದರೆ **(ಪರಿಚ್ಛೇದ 24)**

### ii. ಗುರುತಿಸದ ಅಥವಾ ಸಾಮಾನ್ಯ ಅಥವಾ ಭಾವಿ ಸರಕುಗಳ ಸ್ವಾಮಿತ್ವ ವರ್ಗಾವಣೆ

ಕಾನೂನಿನ ಪರಿಚ್ಛೇದ **18** ರ ಪ್ರಕಾರ, ಸರಕುಗಳನ್ನು ಗುರುತಿಸುವವರೆಗೆ ಒಪ್ಪಂದ ಕಾರ್ಯಗತಗೊಳ್ಳಲು ಯಾವ ಸರಕುಗಳಿಲ್ಲವೆಂದು ಅರ್ಥ. ಅದು ಮಾರಾಟವಾಗದೆ, ಕೇವಲ ಮಾರಾಟದ ಒಡಂಬಡಿಕೆಯೆನಿಸುತ್ತದೆ. ಸರಕಿನಲ್ಲಿನ ಸ್ವಾಮಿತ್ವದ ವರ್ಗಾವಣೆಯು ಮಾರಾಟಗಾರನಿಂದ ಕೊಳ್ಳುವವನಿಗೆ ವರ್ಗವಾಗುವದಕ್ಕೆ ಮುಂಚೆ ವಿಲೇವಾರಿಯಾಗುವ ಸರಕುಗಳು ಯಾವುವೆಂದು ಮೊದಲು ಸಿದ್ಧಗೊಳ್ಳಬೇಕು.

Scanned with CamScanner

## V. ಸರಕುಗಳನ್ನು ಹೇಗೆ ಗುರುತಿಸುತ್ತಾರೆ ?
(How are Goods Ascertained ?)

ಮಾರಾಟ ಒಪ್ಪಂದದ ಸರಕುಗಳನ್ನು ಗುರುತಿಸಲು, ಈ ಕೆಳಗಿನ ಹಂತಗಳನ್ನು ಪಾಲಿಸುತ್ತಾರೆ. ಅವುಗಳೆಂದರೆ–

(ಅ) ಸರಕುಗಳ ಕ್ರಮಬದ್ಧವಾದ ಮೀಸಲಿಡುವ ಅವಶ್ಯಕತೆಯಿರುತ್ತದೆ, ಅಂದರೆ ವಿವರಣೆಯೊಂದಿಗೆ ಗುರುತಿಸುವ ಸಾಧ್ಯತೆಯಿರಬೇಕು.. ಸರಕು ಮೀಸಲಿಡುವದು ಕ್ರಮಬದ್ಧವೆನಿಸಬೇಕಾದರೆ–

1. ಒಪ್ಪಂದದಲ್ಲಿ ಸೂಚಿಸಿದ ವಿವರಣೆ ಮತ್ತು ಗುಣಮಟ್ಟಕ್ಕೆ ಸರಕುಗಳು ಹೋಲಬೇಕು.
2. ಸರಕುಗಳು ವಿಲೇವಾರಿ ಹಂತದಲ್ಲಿರಬೇಕು.
3. ಸರಕುಗಳನ್ನು ಷರತ್ತು ರಹಿತವಾಗಿ ಮೀಸಲಿಡಬೇಕು.
4. ಸರಕುಗಳು ಮೀಸಲಿಡುವಿಕೆಯನ್ನು ಮಾರಾಟಗಾರನು ಖರೀದಿದಾರನ ಅನುಮತಿ ಅಥವಾ ಖರೀದಿದಾರನು ಮಾರಾಟಗಾರನ ಅನುಮತಿಯೊಂದಿಗೆ ಮಾಡಿರಬೇಕು.
5. ಅದನ್ನು ಸ್ಪಷ್ಟವಾಗಿ ಇಲ್ಲವೇ ಸೂಚ್ಯವಾಗಿ ಮಾಡಿರಬೇಕು.
6. ಒಪ್ಪಿಗೆಯನ್ನು ಮೀಸಲಿಡುವದಕ್ಕೆ ಮುಂಚೆ ಅಥವಾ ನಂತರ ನೀಡಿರಬೇಕು.

(ಬ) ಮೀಸಲಿಡುವ ಪದ್ಧತಿ– ಗುರುತಿಸಲಾರದ ಸರಕುಗಳಲ್ಲಿ, ಸರಕುಗಳಲ್ಲಿನ ಸ್ವಾಮಿತ್ವವು ಅವುಗಳನ್ನು ಗುರುತಿಸಿದಾಗಲೇ ವರ್ಗಾವಣೆಯಾಗುತ್ತದೆ ಮತ್ತು ಅವುಗಳನ್ನು ಸರಿಯಾಗಿ ಮೀಸಲಿಟ್ಟಿರಬೇಕು. ಮೀಸಲಿಡುವ ಪದ್ಧತಿಯೆಂದರೆ –

1. ಖರೀದಿದಾರನ ಒಪ್ಪಿಗೆಯೊಂದಿಗೆ ಒಪ್ಪಂದದ ಸರಕುಗಳನ್ನು ಇತರ ಸರಕುಗಳಿಂದ ಬೇರ್ಪಡಿಸುವದು.
2. ಒಪ್ಪಂದದ ಪರಿಮಾಣದಷ್ಟು ಸರಕುಗಳನ್ನು ಪೆಟ್ಟಿಗೆಗಲ್ಲಿ ಇಡುವದು.
3. ಒಪ್ಪಂದದ ಸರಕುಗಳನ್ನು ಸಾರಿಗೆಯವರಿಗೆ ಒಪ್ಪಿಸುವದು ಅಥವಾ ಖರೀದಿದಾರನಿಗೆ ರವಾನಿಸಲು ಇತರ ನಿಕ್ಷೇಪಿತನಿಗೆ ಒಪ್ಪಿಸುವದು ಮತ್ತು ವಿಲೇವಾರಿಯ ಹಕ್ಕನ್ನು ಕಾಯ್ದಿರಿಸಲಾರದೆ ಹಸ್ತಾಂತರಿಸುವದು.

## VI. ಹಕ್ಕು ವರ್ಗಾವಣೆ (Trasfer of Tittle)

ಒಬ್ಬನು ತಾನು ಹೊಂದಿದ ಹಕ್ಕುಗಳಿಗಿಂತ ಹೆಚ್ಚಿನ ಹಕ್ಕುಗಳನ್ನು ಮತ್ತೊಬ್ಬರಿಗೆ ವರ್ಗಾಯಿಸಲಾರನು.

ಈ ನಿಯಮವನ್ನು 'nemo dat quod non habet' ಎಂಬ ಉಕ್ತಿಯಿಂದ ರೂಪಿಸಲಾಗಿದೆ. ಸಾಮಾನ್ಯ ನಿಯಮದಂತೆ, ತಾನು ಸರಕುಗಳ ಮಾಲಿಕನಾಗಿರದೆ ಅಥವಾ ಅಧಿಕಾರ ಹೊಂದಿರವನಾಗಿರದೆ ಅಥವಾ ಮಾಲಿಕನ ಒಪ್ಪಿಗೆ ಪಡೆದವನಾಗಿರದೆ ಮತ್ತೊಬ್ಬರಿಗೆ ಉತ್ತಮ ಹಕ್ಕನ್ನು ನೀಡಲಾರನು ಮತ್ತು ಸರಕುಗಳನ್ನು ಮಾರಲಾರನು. ನಿಜವಾದ ಮಾಲಿಕನನ್ನು

Scanned with CamScanner

ಹೊರತುಪಡಿಸಿ ಬೇರೆ ಯಾರಾದರೂ ಸರಕುಗಳನ್ನು ಮಾರಿದರೆ, ಅವನು ತಾನು ಹೊಂದಿದ ಹಕ್ಕಿಗಿಂತ ಉತ್ತಮವಾದ ಹಕ್ಕನ್ನು ಖರೀದಿದಾರನಿಗೆ ವರ್ಗಾಯಿಸಲಾರನು.

ಒಬ್ಬ ನೈಜ ಮಾಲಿಕನಾಗಿರದ ವ್ಯಕ್ತಿಯಿಂದ ಎಷ್ಟೇ ಮುಗ್ಧವಾಗಿ ಸರಕುಗಳನ್ನು ಖರೀದಿಸಿದರೂ ಸಹ, ಅವನು ಸರಕುಗಳ ಸ್ವಾಮಿತ್ವವನ್ನು ಪಡೆಯಲಾರನು. ಅಂದರೆ, ಕೇವಲ ನಿಜವಾದ ಮಾಲಿಕನು ಮಾತ್ರ ಉತ್ತಮ ಹಕ್ಕನ್ನು ಮತ್ತೊಬ್ಬರಿಗೆ ವರ್ಗಾಯಿಸಲು ಸಾಧ್ಯ.

ಆದರೆ, ಈ ನಿಯಮದ ಕಠಿಣತೆಯನ್ನು ಅನುಲಕ್ಷಿಸಿ ಮತ್ತು ಮುಗ್ಧನಾದ ವರ್ಗಾವಣೆ ಪಡೆದವನನ್ನು ರಕ್ಷಿಸಲು, ಕಾನೂನಿನ ಪರಿಚ್ಛೇದ 27 ರಿಂದ 30 ರವರೆಗಿನ ನಿಯಮಗಳನ್ನು ಸೂಚಿಸಲಾಗಿದೆ.

### 1. ವರ್ತಕ ದಲ್ಲಾಳಿಯಿಂದ ಅನಧೀಕೃತ ಮಾರಾಟ (ಪರಿಚ್ಛೇದ 27)

ಒಬ್ಬ ವರ್ತಕ ದಲ್ಲಾಳಿಯು ಸರಕುಗಳನ್ನು ಮಾರುವ ಇಲ್ಲವೆ ಮಾರಾಟಕ್ಕಾಗಿ ರವಾನಿಸುವ ಅಥವಾ ಖರೀದಿಸುವ ಅಥವಾ ಸರಕುಗಳನ್ನಾಧರಿಸಿ ಸಾಲ ಪಡೆಯುವ ಅಧಿಕಾರವನ್ನು ಹೊಂದಿರುತ್ತಾನೆ. ಈ ಕೆಳಗಿನ ಸಂದರ್ಭದಲ್ಲಿ ವರ್ತಕ ದಲ್ಲಾಳಿಯು ಕ್ರಮಬದ್ಧ ಹಕ್ಕನ್ನು ವರ್ಗಾಯಿಸಬಹುದಾಗಿದೆ–

1. ಅವನು ಮಾಲಿಕನ ಒಪ್ಪಿಗೆಯೊಂದಿಗೆ ಸರಕು ಅಥವಾ ಸರಕು ಮಾಲಿಕತ್ವ ಪತ್ರಗಳನ್ನು ತನ್ನ ಸ್ವಾಧೀನದಲ್ಲಿ ಹೊಂದಿರಬೇಕು.
2. ತನ್ನ ನಿತ್ಯದ ವ್ಯವಹಾರದಲ್ಲಿ ಸರಕುಗಳನ್ನು ಮಾರಾಟಗೊಳಿಸುತ್ತಾನೆ.
3. ಮಾರಾಟಗಾರನ ಅಧಿಕಾರವನ್ನು ನಂಬಿ, ಖರೀದಿದಾರನು ಪ್ರಾಮಾಣಿಕತೆಯಿಂದ ಕೊಳ್ಳುತ್ತಾನೆ.

### 2. ಸ್ವಯಂ ಕೃತ ಪ್ರತಿಬಂಧದ ಮೂಲಕ ಹಕ್ಕು ವರ್ಗಾವಣೆ (ಪರಿಚ್ಛೇದ 27)

ಮಾರಾಟಗಾರನ ಒಂದು ವರ್ತನೆಯಿಂದ ನಂಬುವಂತೆ ಮಾಡಿದಾಗ, ಕೊಳ್ಳುವವನು ಮಾರಾಟಗಾರನಿಗಿಂತ ಉತ್ತಮ ಹಕ್ಕು ಪಡೆದುಕೊಳ್ಳುತ್ತಾನೆ.

### 3. ಜಂಟಿ ಮಾಲಿಕನಿಂದ ಮಾರಾಟ (ಪರಿಚ್ಛೇದ 28)

ಸಾಮಾನ್ಯವಾಗಿ, ಒಬ್ಬ ಸಹಮಾಲಿಕನು ತನ್ನ ಪಾಲನ್ನು ಮಾರಬಹುದು. ಆದರೆ ಯಾವುದೇ ಜಂಟಿ ಮಾಲಿಕನು ಈ ಕೆಳಗಿನ ಷರತ್ತಿನಂತೆ ತನ್ನ ಪಾಲನ್ನು ಮಾರಾಟ ಮಾಡಬಹುದು–

1. ಒಬ್ಬ ಸಹಮಾಲಿಕನು ಇನ್ನುಳಿದ ಸಹ ಮಾಲಿಕರ ಅನುಮತಿಯಿಂದ ಸರಕುಗಳ ಸ್ವಾಧೀನತೆ ಹೊಂದಿರಬೇಕು.
2. ಖರೀದಿದಾರನು ಪ್ರಾಮಾಣಿಕತೆಯಿಂದ ವರ್ತಿಸಿರಬೇಕು.
3. ಮಾರಾಟಗಾರನಿಗೆ ಮಾರುವ ಹಕ್ಕಿಲ್ಲವೆಂಬ ಮಾಹಿತಿಯು ಕೊಳ್ಳುವವನಿಗೆ ತಿಳಿದಿರಬಾರದು.

Scanned with CamScanner

### 4. ಅನೂರ್ಜಿತವಾಗಬಲ್ಲ ಒಪ್ಪಂದದ ಪ್ರಕಾರ ಸರಕು ಹೊಂದಿದವನು ಮಾರಾಟಗೊಳಿಸುವದು (ಪರಿಚ್ಛೇದ 29)

ಇಂತಹ ವ್ಯಕ್ತಿಯು ಕೆಳಗಿನ ಷರತ್ತಿಗೊಳಪಟ್ಟು ಸರಕುಗಳನ್ನು ಮಾರಬಹುದು-

1. ಸರಕುಗಳು ಅನೂರ್ಜಿತವಾಗಬಲ್ಲ ಒಪ್ಪಂದದ ಪ್ರಕಾರ ಬಂದಿರುತ್ತವೆ, ಆದರೆ ಪೂರ್ತಿ ಅನೂರ್ಜಿತ ಒಪ್ಪಂದದ ಮೂಲಕವಾಗಿರಬಾರದು.
2. ಅನೂರ್ಜಿತವಾಗಬಲ್ಲ ಒಪ್ಪಂದವು ಮುಕ್ತಾಯವಾಗಿರಬಾರದು.
3. ಮಾರಾಟಗಾರನ ದೋಷ ಭರಿತ ಮಾಲಿಕತ್ವದ ಬಗ್ಗೆ ಖರೀದಿದಾರನಿಗೆ ತಿಳಿದಿರಬಾರದು.

### 5. ಮಾರಾಟದ ನಂತರವೂ ಸರಕುಗಳ ಸ್ವಾಧೀನತೆ ಹೊಂದಿದ ಮಾರಾಟಗಾರನು ಮಾರಾಟ ಮಾಡುವದು (ಪರಿಚ್ಛೇದ 30 (1))

ಒಂದು ವೇಳೆ ಮಾರಾಟಗಾರನೊಬ್ಬನು ತಾನು ಮಾರಿದ ಸರಕುಗಳ ಸ್ವಾಧೀನತೆಯನ್ನು ಹೊಂದಿದ್ದು ಅವುಗಳನ್ನು ಮತ್ತೆ ಮಾರಾಟಗೊಳಿಸಿದರೆ ಎರಡನೆಯ ಖರೀದಿದಾರನು ಕೆಳಗಿನ ಷರತ್ತಿಗೆ ಒಳಪಟ್ಟು ಮಾಲಿಕತ್ವ ಪಡೆಯುತ್ತಾನೆ.

1. ಮಾರಾಟಗಾರನು ಸರಕುಗಳನ್ನು ಒಬ್ಬ ಮಾರಾಗಟಗಾರನಾಗಿ ಹೊಂದಿದ್ದು ಒಬ್ಬ ನಿಕ್ಷೇಪಿತನಾಗಿ ಹೊಂದಿರಕೂಡದು.
2. ಕೊಳ್ಳುವವನು ಪ್ರಾಮಾಣಿಕವಾಗಿ ವರ್ತಿಸುತ್ತಾನೆ. ಅವನಿಗೆ ಮೊದಲಿನ ಮಾರಾಟದ ಬಗ್ಗೆ ತಿಳಿದಿರ ಕೂಡದು.

### 6. ಮಾರಾಟಕ್ಕಿಂತ ಮೊದಲು ಕೊಳ್ಳುವವನಲ್ಲಿರುವ ಸರಕುಗಳ ಮಾರಾಟ (ಪರಿಚ್ಛೇದ 30 (2))

ಕೆಲವು ಸಾರಿ ಮಾರಾಟವಾಗುವದಕ್ಕಿಂತ ಮುಂಚೆಯೇ ಸರಕುಗಳು ಖರೀದಿದಾರನ ಸ್ವಾಧೀನಕ್ಕೆ ಬಂದಿರುವ ಸಾಧ್ಯತೆಗಳಿವೆ. ಅಂತಹ ಖರೀದಿದಾರನು ಸರಕುಗಳನ್ನು ಮಾರಾಟ ಮಾಡಿ, ಹಕ್ಕನ್ನು ವರ್ಗಾಯಿಸಬಹುದು. ಅದರ ಷರತ್ತುಗಳೆಂದರೆ-

1. ಮೊದಲಿನ ಖರೀದಿದಾರನು ಸರಕುಗಳನ್ನು ಮಾರಾಟ ಒಡಂಬಡಿಕೆಯ ಪಡೆದುಕೊಂಡಿರಬೇಕು.
2. ಎರಡನೆಯ ಖರೀದಿದಾರನು ಪ್ರಾಮಾಣಿಕವಾಗಿ ವರ್ತಿಸಿರಬೇಕು. ಮತ್ತು ಮೂಲ ಮಾರಾಟಗಾರನು ಹೊಂದಿದ ಸ್ವಾಧೀನತಾ ಹಕ್ಕುಗಳ ಬಗ್ಗೆ ಗೊತ್ತಾಗಿರಬಾರದು.

### 7. ಹಣಪಾವತಿಯಾಗದ ಮಾರಾಟಗಾರನಿಂದ ಮರು-ಮಾರಾಟ (ಪರಿಚ್ಛೇದ 54(3))

ಒಬ್ಬ ಮಾರಾಟಗಾರನಿಗೆ ತನ್ನ ಸಾಲಗಾರನಿಂದ ಬರಬೇಕಾದ ಹಣವು ಪಾವತಿಯಾಗದಿದ್ದರೆ, ಅವನು ಸರಕುಗಳನ್ನು ಮರು ಮಾರಾಟಗೊಳಿಸಿದರೆ, ಅವುಗಳನ್ನು ಕೊಂಡವನು ನಿಜವಾದ ಮಾಲಿಕತ್ವ ಪಡೆಯುತ್ತಾನೆ.

8. ಇನ್ನುಳಿದ ಕಾರ್ಯಗಳು

1. ಕೆಲವೊಂದು ಸಂದರ್ಭಗಳಲ್ಲಿ ಕಳೆದುಹೋದ ಸರಕು ಕಂಡುಕೊಂಡುವವನು ಕ್ರಮಬದ್ಧವಾದ ಮಾರಾಟ ಮಾಡಬಹುದು.
2. ಒಬ್ಬ ಸ್ವಾಮಿತ್ವ ವರ್ಗಾವಣೆ ಪತ್ರವನ್ನು ಕ್ರಮಬದ್ಧವಾಗಿ ಹೊಂದಿರದವನು ವರ್ಗಾವಣೆ ಮಾಡಿದವನಿಗಿಂತ ಉತ್ತಮ ಹಕ್ಕು ಪಡೆಯುತ್ತಾನೆ.
3. ದಿವಾಳಿತನದ ಪ್ರಕಾರಣದಲ್ಲಿ ಆಸ್ತಿ ನಿರ್ವಹಣೆದಾರನು ಕ್ರಮಬದ್ಧ ಹಕ್ಕು ಪಡೆಯುತ್ತಾನೆ.
4 ಸಕರುಗಳ ಗಿರವಿಧಾರಕನು ಕೆಲವು ಸಂದರ್ಭಗಲ್ಲಿ ಉತ್ತಮ ಹಕ್ಕನ್ನು ವರ್ಗಾಯಿಸುತ್ತಾನೆ.